ದಿನಾಂಕ 16-08-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 2 ರಿಂದ 7 ನೇ ಪ್ರತಿವಾದಿಗಳ ಪರ ಶ್ರೀ ಆರ್.ವಿ.ಡಬ್ಲ್ಯು ವಕೀಲರಿಂದಃ**

1. ಈ ದಾವೆಯನ್ನು ಚಿಕ್ಕಪ್ಪ ಮತ್ತು ಆತನ ಸಹೋದರಿಯರು ಸಲ್ಲಿಸಿದ್ದಾರೆ. ವಾದಿಯರು ನನಗೆ ಸಂಬಂಧಿಗಳು ಆಗಬೇಕು. ಈ ದಾವೆಯನ್ನು ಹಿಸ್ಸೇಯನ್ನು ಸರಿಯಾಗಿ ನೀಡಿರುವುದಿಲ್ಲ ಎಂದು ಕೋರಿ ಸಲ್ಲಿಸಿದ್ದಾರೆ. ಮೊದಲಿಗೆ ವಾದಿಯರ ಮತ್ತು ಪ್ರತಿವಾದಿಯರ ನಡುವೆ ಸಮನಾಗಿ ಹಿಸ್ಸೇ ಆಗಿರುವುದಿಲ್ಲ. ದಾವಾ ಆಸ್ತಿಗಳು ಹಿರೇಕಣಗಿ ಮತ್ತು ಹೊಸಳ್ಳಿ ಗ್ರಾಮಗಳಲ್ಲಿ ಇವೆ. ದಾವಾ ಆಸ್ತಿಗಳ ಸರ್ವೇ ನಂಬರುಗಳು ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಗಳ ಪೈಕಿ ಒಂದು ಜಮೀನು 1 ಎಕರೆ 12 ಗುಂಟೆ, ಮತ್ತೊಂದು ಜಮೀನು 2 ಎಕರೆ ಚಿಲ್ಲರೆ, ಮತ್ತೊಂದು ಜಮೀನು 2 ಎಕರೆ ವಿಸ್ತೀರ್ಣ ಇವೆ. ದಾವಾ ಆಸ್ತಿಗಳು ವಾದಿ ಮತ್ತು 2 ನೇ ಪ್ರತಿವಾದಿಗೆ ದಾವಾ ಆಸ್ತಿಗಳು ಹಿರಿಯರಿಂದ ಬಂದಿರುತ್ತವೆ.

2. ನಾನು ಹೇಳುವ 1 ಎಕರೆ 12 ಗುಂಟೆ ಜಮೀನು ಖುಷ್ಕಿ ಜಮೀನಾಗಿದ್ದು ಮತ್ತು ಮತ್ತೊಂದು 2 ಎಕರೆ ವಿಸ್ತೀರ್ಣ ಇರುವ ಜಮೀನು ನೀರಾವರಿ ಜಮೀನು ಎಂದರೆ ಸರಿ. ನನಗೆ ಸೇರಿದ ಜಮೀನು ಹೊಸಳ್ಳಿ ಗ್ರಾಮದಲ್ಲಿ ಇದೆ. ಅದರ ಸರ್ವೇ ನಂಬರ ನನಗೆ ನೆನಪಿಲ್ಲ. ವಾದಿಗಳು ಮತ್ತು 1 ಹಾಗೂ 2 ನೇ ಪ್ರತಿವಾದಿಗಳಿಗೆ ಹಿರಿಯರಿಂದ 2 ಜಮೀನುಗಳು ಮಾತ್ರ ಬಂದಿರುತ್ತವೆ. ಅವುಗಳ ಸರ್ವೇ ನಂಬರುಗಳು ನನಗೆ ಗೊತ್ತಿರುವುದಿಲ್ಲ. ದಾವೆಯಲ್ಲಿ 2 ಪಂಚಾಯ್ತಿ ಆಸ್ತಿಗಳಿವೆ. ಅವುಗಳ ಸಂಖ್ಯೆಗಳು ನನಗೆ ಗೊತ್ತಿಲ್ಲ. ಲಕ್ಷ್ಮಪ್ಪ ಪಕ್ಕೀರಪ್ಪ ಬಾವಿಮನಿ ರವರು ನನಗೆ ಸಂಬಂಧಿಕರು. ವಾದಿಗಳಿಗೆ ಮತ್ತು 1 ಹಾಗೂ 2 ನೇ ಪ್ರತಿವಾದಿಗಳಿಗೆ ದಾವಾ ಆಸ್ತಿಗಳನ್ನು

ಹೊರತುಪಡಿಸಿ ಬೇರೆ ಆಸ್ತಿಗಳು ಇರುವವೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ಲಕ್ಷ್ಮಪ್ಪ ಪಕ್ಕೀರಪ್ಪ ಬಾವಿಮನಿ ಅವರ ಹೆಸರಿನಲ್ಲಿ ಇರುವ ಆಸ್ತಿ ಸಂಃ 199 ರ ಆಸ್ತಿಯು 1 ನೇ ಪ್ರತಿವಾದಿ ಯಿಂದ ಬಂದ ಆಸ್ತಿ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಆಸ್ತಿಯು 1 ನೇ ಪ್ರತಿವಾದಿಗೆ ಸರಕಾರವು ಮಂಜೂರು ಮಾಡಿದ ಆಸ್ತಿ ಆಗಿರುತ್ತದೆ ಎಂದು ನುಡಿಯುತ್ತಾರೆ.

3. ಸದರಿ ಆಸ್ತಿ ಸಂಃ 199 ನ್ನು 1 ನೇ ಪ್ರತಿವಾದಿಗೆ ಸರಕಾರವು ಮಂಜೂರು ಮಾಡಿದ ಬಗ್ಗೆ ನನಗೆ ಮಾಹಿತಿ ಇದೆ. ಆಕೆಗೆ ಸರಕಾರವು ಮಂಜೂರು ಮಾಡಿದ್ದಕ್ಕೆ ಸಂಬಂಧಿಸಿದಂತೆ ನಾನು ಪಟ್ಟಾ ದಾಖಲೆಯನ್ನು ನಾನು ನೋಡಿರುತ್ತೇನೆ. ಯಾವ ವರ್ಷದಲ್ಲಿ ಸದರಿ ಆಸ್ತಿಯನ್ನು 1 ನೇ ಪ್ರತಿವಾದಿಗೆ ಮಂಜೂರ ಮಾಡಿರುತ್ತಾರೆಂದು ನಾನು ಚಿಕ್ಕವನಿದ್ದರಿಂದ ನನಗೆ ಗೊತ್ತಿಲ್ಲ. ಸುಮಾರು 5-6 ವರ್ಷಗಳ ಹಿಂದೆ ಸದರಿ ಆಸ್ತಿಗೆ ಸಂಬಂಧಿಸಿದಂತೆ ನಾನು ಪಟ್ಟಾ ದಾಖಲೆಯನ್ನು ನೋಡಿರುತ್ತೇನೆ. ಸದರಿ ಪಟ್ಟಾವನ್ನು ನೋಡಿದಾಗ ಕೇವಲ ನಿವೇಶನವನ್ನು ಮಂಜೂರು ಮಾಡಿದ ಬಗ್ಗೆ ನಮೂದು ಇತ್ತು. ಆಸ್ತಿ ಸಂಃ 199 ರ ಆಸ್ತಿಯು ಪ್ರಸ್ತುತ ಲಕ್ಷ್ಮಣ ಅವರ ಹೆಸರಿನಲ್ಲಿ ಇರಬಹುದು. ಆತನ ಹೆಸರಿನಲ್ಲಿ ಸದರಿ ಆಸ್ತಿಯು ಇರುವ ಬಗ್ಗೆ ದಾಖಲೆಯನ್ನು ನೋಡಿರುವುದಿಲ್ಲ. ನನಗೆ ಗ್ರಾಮದಲ್ಲಿ ಇರುವ ಪಂಚಾಯ್ತಿ ಆಧಿಕಾರಿಗಳು ಹೇಳಿದ ಕಾರಣಕ್ಕೆ ಸದರಿ ಆಸ್ತಿಯನ್ನು ಲಕ್ಷ್ಮಣ ಅವರಿಗೆ 1 ನೇ ಪ್ರತಿವಾದಿಯು ನೀಡಿರುತ್ತಾರೆಂದು ಎಂದು ತಿಳಿದು ಬಂದಿರುತ್ತದೆ. ಸದರಿ ವಿಷಯವನ್ನು ನಾನು ಪಂಚಾಯ್ತಿ ಅಧಿಕಾರಿಗಳಲ್ಲಿ ವಿಚಾರಣೆ ಮಾಡಿದಾಗ ಹೇಳಿರುತ್ತಾರೆ. ನಾನು ಪಂಚಾಯ್ತಿಯಲ್ಲಿ ಆಸ್ತಿ ಸಂಃ 199 ಕ್ಕೆ ಸಂಬಂದಿಸಿದಂತೆ ಆದ ವ್ಯವಹಾರಗಳ ಬಗ್ಗೆ ದಾಖಲೆಗಳನ್ನು ನೋಡಿರುವುದಿಲ್ಲ.

4. ಆಸ್ತಿ ಸಂಃ 199 ರ ಆಸ್ತಿಯು 1 ನೇ ಪ್ರತಿವಾದಿಯ ಹೆಸರಿನಲ್ಲಿ ಪಂಚಾಯಿತಿ ದಾಖಲೆಗಳಲ್ಲಿ ನಮೂದು ಆದ ಬಗ್ಗೆ ದಾಖಲೆಗಳನ್ನು ನೋಡಿದ್ದೀರಾ ಎಂಬ ಸೂಚನೆಗೆ

ಸಾಕ್ಷಿಯು ತಾಲೂಕು ಪಂಚಾಯಿತಿಯಲ್ಲಿ ನಮೂದು ಆದ ಬಗ್ಗೆ ನೋಡಿರುತ್ತೇನೆ ಎಂದ ನುಡಿಯುತ್ತಾರೆ. ಸದರಿ ಆಸ್ತಿಯನ್ನು ಸರಕಾರವು 1 ನೇ ಪ್ರತಿವಾದಿಗೆ ಮಂಜೂರು ಮಾಡಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳು ನನಗೆ ಆಪ್ತರು ಎಂದರೆ ಸರಿ. ವಾದಿಯರ ಮಾತನ್ನು ಕೇಳಿ ಅವರಿಗೆ ಅನುಕೂಲ ಮಾಡಲು ಆಸ್ತಿ ಸಂಃ 199 ನ್ನು ಸರಕಾರವು 1 ನೇ ಪ್ರತಿವಾದಿಗೆ ಮಂಜೂರು ಮಾಡದೇ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ವಾದಿಯರು ಮತ್ತು ಅವರ ಕುಟುಂಬದಲ್ಲಿ ಆದ ವ್ಯವಹಾರದಲ್ಲಿ ನಾನು ಭಾಗವಹಿಸಿರುವುದಿಲ್ಲ. ಅವರ ನಡುವೆ ಆದ ವಿಭಾಗದಲ್ಲಿಯೂ ಸಹ ನಾನು ಭಾಗವಹಿಸಿರುವುದಿಲ್ಲ. ವಾದಿಯರು ಅವರ ಕುಟುಂಬದಲ್ಲಿ ಹಿಸ್ಸೇ ಆಗಿಲ್ಲ ಎಂದು ತಿಳಿಸಿದ ಮೇರೆಗೆ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1988 ರಲ್ಲಿ 3, 4 ನೇ ವಾದಿಗಳು ಹಾಗೂ 2 ನೆ ಪ್ರತಿವಾದಿ ನಡುವೆ ಆದ ಮೌಖಿಕ ಹಿಸ್ಸೇಯ ಪ್ರಕಾರ ಡ ಸಂಖ್ಯೆ 2391 ವಿದಿಬದ್ದಾಗಿ ಮಂಜೂರು ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. 1 ಮತ್ತು 2 ನೇ ವಾದಿಗಳು ಹಾಗೂ ಮೃತ 1 ನೇ ಪ್ರತಿವಾದಿಯ ಒಪ್ಪಿಗೆಯ ಮೇರೆಗೆ ಸದರಿ ಡ ಸಂಃ 2391 ಮಂಜೂರು ಆಗಿತ್ತು ಎಂದರೆ ಗೊತ್ತಿಲ್ಲ. ದಾವಾ ಶೆಡ್ಯೂಲ್ ಎ ಮತ್ತು ಬಿ ಅಸ್ತಿಗಳು ವಾದಿಗಳು ಮತ್ತು 1 ಹಾಗೂ 2 ನೇ ಪ್ರತಿವಾದಿಗಳ ಒಟ್ಟು ಕುಟುಂಬಕ್ಕೆ ಸೇರಿದ ಜಮೀನುಗಳಾಗಿದ್ದವು ಎಂದರೆ ಸರಿ. ಸದರಿ 2 ಜಮೀನುಗಳನ್ನು ಹೊರತುಪಡಿಸಿ ಅವರ ಕುಟುಂಬಕ್ಕೆ ಬೇರೆ ಜಮೀನುಗಳು ಇಲ್ಲ ಎಂದರೆ ಸರಿ. 1988 ರಲ್ಲಿ ಆದ ಮೌಖಿಕ ವಿಭಾಗದ ಪ್ರಕಾರ ದಾವಾ ಶೆಡ್ಯೂಲ್ ಎ ಆಸ್ತಿಯು 2 ನೇ ಪ್ರತಿವಾದಿಯ ಹಿಸ್ಸೇಗೆ ಬಂದಿರುತ್ತದೆ ಎಂದರೆ ಗೊತ್ತಿಲ್ಲ. ಅದೇ ರೀತಿ ದಾವಾ ಶೆಡ್ಯೂಲ್ ಬಿ ಆಸ್ತಿಯು 3 ಮತ್ತು 4 ನೇ ಪ್ರತಿವಾದಿಗಳ ಜಂಟಿ ಹಿಸ್ಸೇಗೆ ಬಂದಿರುತ್ತದೆ ಎಂದರೆ ಗೊತ್ತಿಲ್ಲ. 1988 ರ ಹಿಸ್ಸೆಗೆ ಬಂದ ಜಮೀನುಗಳನ್ನು ಪ್ರತ್ಯೇಕವಾಗಿ 3 ಮತ್ತು 4 ನೇ ವಾದಿ ಹಾಗೂ 2 ನೇ ಪ್ರತಿವಾದಿಯು ವಹಿವಾಟು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು

ದಾವಾ ಶೆಡ್ಯೂಲ್ ಎ ಆಸ್ತಿಯು ಬೀಳು ಬಿದ್ದಿದ್ದು ಅದನ್ನು ಪ್ರಸ್ತುತ 2 ನೇ ಪ್ರತಿವಾದಿಯು ವಹಿವಾಟು ಮಾಡುತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಶೆಡ್ಯೂಲ್ ಬಿ ಆಸ್ತಿಯನ್ನು 3 ನೇ ವಾದಿಯು ವಹಿವಾಟು ಮಾಡುತ್ತಿದ್ದಾರೆ.

6. 3 ನೇ ವಾದಿಯು ಆಡೂರಿನಲ್ಲಿ ವಾಸವಿದ್ದಾನೆ ಎಂದರೆ ಸರಿ. ಕುರುಬ ಜನಾಂಗದಲ್ಲಿ ಕುರಿ ಸಾಕಾಣಿಕೆಯನ್ನು ಹೆಚ್ಚಿಗೆ ಮಾಡುತ್ತಾರೆ ಎಂದರೆ ಸರಿ. ಅವರು ಹೆಚ್ಚಿಗೆ ವ್ಯವಸಾಯ ಮಾಡುವುದಿಲ್ಲ ಎಂದರೆ ಸರಿ. ಹಡಗಲಿ ಗ್ರಾಮದಲ್ಲಿ 4 ನೇ ವಾದಿಯು ನೌಕರಿ ಮಾಡಿಕೊಂಡು ಜೀವನ ಮಾಡುತ್ತಿದ್ದಾನೆ ಎಂದರೆ ಸಾಕ್ಷಿಯು ಆತನಿಗೆ ನೌಕರಿ ಇರುವುದಿಲ್ಲ ಆದರೆ ಹಡಗಲಿಯಲ್ಲಿ ವಾಸವಿದ್ದಾನೆ ಎಂದು ನುಡಿಯುತ್ತಾರೆ. 1988 ರಲ್ಲಿ ಆದ ಮೌಖಿಕ ವಿಭಾಗಕ್ಕೆ ಸಂಬಂಧಿಸಿದಂತೆ ನನಗೆ ಸಂಪೂರ್ಣ ಮಾಹಿತಿ ಇದೆ ಎಂದರೆ ಸರಿ. ಸದರಿ ಮೌಖಿಕ ಹಿಸ್ಸೇಯಲ್ಲಿ ಆದ ವ್ಯವಸ್ಥೆಯಂತೆ ಆಸ್ತಿ ಸಂಃ 199 ರ ಆಸ್ತಿಯನ್ನು 1 ನೇ ಪ್ರತಿವಾದಿಗೆ ನೀಡಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ.

7. ವಾದಿಯರು ಮತ್ತು 2 ನೇ ಪ್ರತಿವಾದಿಯ ಒಟ್ಟು ಕುಟುಂಬಕ್ಕೆ ಸೇರಿದ ಆಸ್ತಿ ಸಂಃ 220 ಆಸ್ತಿಯು ಚಿಕ್ಕೇರಿಹೊಸಳ್ಳಿ (ಹೊಸಳ್ಳಿ) ಗ್ರಾಮದಲ್ಲಿದೆ ಎಂದರೆ ಸರಿ. ಸದರಿ ಆಸ್ತಿಯು 1988 ರಲ್ಲಿ ಮೌಖಿಕ ಹಿಸ್ಸೇ ಮಾಡಿಕೊಳ್ಳುವಾಗ ಆದ ಹಿಸ್ಸಾ ವ್ಯವಸ್ಥೆಯ ಪ್ರಕಾರ 3 ನೇ ವಾದಿಗೆ ಬಂದಿದ್ದು, ಆತನು ನಂತರದಲ್ಲಿ ಸದರಿ ಆಸ್ತಿಯನ್ನು 2 ನೇ ಪ್ರತಿವಾದಿಗೆ ಖರೀದಿಗೆ ನೀಡಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ಆಸ್ತಿಯು ಒಟ್ಟು ಕುಟುಂಬದ ಆಸ್ತಿ ಎಂದು 3 ನೇ ವಾದಿಯು ಜಗಳ ಮಾಡಿದ್ದರು. ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿ ಅದೂ ಸಹ ಒಟ್ಟು ಕುಟುಂಬದ ಆಸ್ತಿ ಎಂದು ಕೋರಿದ ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿ ಆಸ್ತಿಯಲ್ಲಿ ಹುಲ್ಲನ್ನು ಹಾಕಲು 2 ನೇ ಪ್ರತಿವಾದಿಯು ಹೋಗಿದ್ದರು. ಆ ಸಂದರ್ಭದಲ್ಲಿ 3 ನೇ ವಾದಿಯು 2 ನೇ ಪ್ರತಿವಾದಿಯೊಂದಿಗೆ ಜಗಳ ಮಾಡಿರುತ್ತಾರೆ. ಸದರಿ ಆಸ್ತಿಯು ನನಗೆ ಸೇರಿದ ಆಸ್ತಿಯಾಗಿದ್ದು, ಅದರಲ್ಲಿ ಹುಲ್ಲನ್ನು

ಹಾಕಬೇಡ ಎಂದು 3 ನೇ ವಾದಿಯು ಜಗಳ ಮಾಡಿರುತ್ತಾರೆ. ಸದರಿ ಜಗಳವು ಸುಮಾರು 10 ವರ್ಷಗಳ ಹಿಂದೆ ಆಗಿರುತ್ತದೆ. 1988 ರಲ್ಲಿ ಆದ ಮೌಖಿಕ ಹಿಸ್ಸೇ ಪ್ರಕಾರ ಡಿ ಶೆಡ್ಯೂಲ್ ಆಸ್ತಿಯು 3 ನೇ ವಾದಿಯ ಹಿಸ್ಸೇಗೆ ಬಂದಿದ್ದು ನಂತರದಲ್ಲಿ ಅದನ್ನು 3 ನೇ ವಾದಿಯು 2 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾನೆ ಎಂದರೆ ಗೊತ್ತಿಲ್ಲ.

8. 10 ವರ್ಷಗಳ ಹಿಂದೆ ಆದ ಜಗಳವನ್ನು ಬಿಡಿಸಲು ನಾನು ಹೋಗಿರುವುದಿಲ್ಲ. ದಾವಾ ಶೆಡ್ಯೂಲ್ ಇ ಆಸ್ತಿಯು ಯಾರ ಹಿಸ್ಸೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾ ಶೆಡ್ಯೂಲ್ ಇ ಆಸ್ತಿಯಲ್ಲಿ ಮೊದಲಿಗೆ ದನದ ಕೊಟ್ಟಿಗೆ ಇದ್ದು ಅದನ್ನು ಎಲ್ಲರೂ ಸಾಮೂಹಿಕವಾಗಿ ಉಪಯೋಗ ಮಾಡುತ್ತಿದ್ದರು. ಸಾಕ್ಷಿ ಮುಂದುವರೆದು ಪ್ರಸ್ತುತ ದಾವಾ ಶೆಡ್ಯೂಲ್ ಇ ಆಸ್ತಿಯಲ್ಲಿ ದನದ ಕೊಟ್ಟಿಗೆ ಇರುವುದಿಲ್ಲ ಎಂದು ನುಡಿಯುತ್ತಾರೆ. ಈಗಲೂ ಸಹ ದಾವಾ ಶೆಡ್ಯೂಲ್ ಇ ಆಸ್ತಿಯಲ್ಲಿದನದ ಕೊಟ್ಟಿಗೆ ಇದ್ದು ಅದನ್ನು ಎಲ್ಲರೂ ಸಾಮೂಹಿಕವಾಗಿ ಉಪಯೋಗ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯ ಸದರ ಆಸ್ತಿಯು ಖುಲ್ಲಾ ಜಾಗವಿದ್ದು ಎಲ್ಲರೂ ಸಾಮೂಹಿಕವಾಗಿ ಉಪಯೋಗ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಇರುವ ಸಂತಿಗಳನ್ನು ಬರೆಯಲು ನಾನೇ ಮಾಹಿತಿ ಕೊಟ್ಟಿರುತ್ತೇನೆ. ನಾನು ವಾದಿಗಳು ಹಾಗೂ 1 ಹಾಗೂ 2 ನೇ ಪ್ರತಿವಾದಿಗಳ ಕುಟುಂಬದ ವ್ಯವಹಾರದಲ್ಲಿ ಭಾಗವಹಿಸದೇ ಇರುವ ಕಾರಣದಿಂದ ಅವರ ನಡುವೆ ಆದ ಹಿಸ್ಸೇಯು ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿ. ವಾದಿಗಳಿಗೆ ಅನುಕೂಲ ಮಾಡಿಕೊಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಯಾವುದೇ ಹಿಸ್ಸೇ ಆಗಿರುವುದಿಲ್ಲ ಎಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾಸ್ತವಿಕವಾಗಿ ವಾದಿಗಳು ಮತ್ತು 1 ಹಾಗೂ 2 ನೇ ಪ್ರತಿವಾದಿಗಳ ಕುಟುಂಬದಲ್ಲಿ 1988 ರಲ್ಲಿಯೇ ವಿಭಾಗ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

**<u>ಮರು ವಿಚಾರಣೆಃಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.
Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್

ಸಾಕ್ಷಿದಾರರ ಸಹಿ